ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಗಲ

<u>ಸಿಸಿ.ನಂ. **1061/ 2022**</u>

| | | | |
|---|---|---|---|
| ಸಾಕ್ಷಿದಾರರು | ಃ | ಪೂರ್ಣಿಮ ಕೆ.ವಿ | ಸಿ.ಡಬ್ಲ್ಯೂ ಃ 1 |
| ತಂದೆ /ಗಂಡನ ಹೆಸರು | ಃ | ವಿರಾಂಜನಪ್ಪ | ಪಿ.ಡಬ್ಲ್ಯೂ ಃ 1 |
| ವಯಸ್ಸು | ಃ | **32** ವರ್ಷ | |
| ವೃತ್ತಿ | ಃ | ಅಬಕಾರಿ ಉಪನಿರೀಕ್ಷಕರು, ಹೆಚ್.ಎಸ್.ಆರ್ ಲೇಔಟ್, ವಲಯ **44** ಬೆಂಗಳೂರು. | |
| ವಾಸ ಸ್ಥಳ | ಃ | ಬೆಂಗಳೂರು. | |

<u>ಸಾಕ್ಷಿಯನ್ನು ದಿನಾಂಕ **22.01.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ರವರಿಂದಃ-.</u>**

ನಾನು 28.06.2019 ರಿಂದ 06.07.2023 ರವರೆಗೆ ನಾಗಮಂಗಲ ಅಬಕಾರಿ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 31.05.2022 ರಂದು ಸಂಜೆ 04.45 ರ ಸಮಯಕ್ಕೆ ಕಪ್ಪು ಬಣ್ಣದ ಟೀಶರ್ಟ್ ದರಿಸಿದ ಒಬ್ಬ ವ್ಯಕ್ತಿ ಬೆಳ್ಳೂರಿನಿಂದ ನಾಗಮಂಗಲಕ್ಕೆ ಗಾಂಜಾ ಖರೀದಿಸಲು ಬರುತ್ತಿರುವುದಾಗಿ ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ನನ್ನ ಮೇಲಾದಿಕಾರಿಗಳಿಗೆ ತಿಳಿಸಿ ಅವರಿಂದ ಅಧಿಕಾರ ಪತ್ರ ಪಡೆದು ಚಾಸಾ 3 ರಿಂದ 6 ಮತ್ತು 9 ರವರನ್ನು ಜೊತೆಯಲ್ಲಿ ಕರೆದುಕೊಂಡು, ಅಗತ್ಯ ಸಾಮಾಗ್ರಿ ಜೊತೆಯಲ್ಲಿ ತೆಗೆದುಕೊಂಡು ಸರ್ಕಾರಿ ವಾಹನದಲ್ಲಿ ನಾಗಮಂಗಲ ಟಿ.ಬಿ ಬಡಾವಣೆಗೆ ಹೋದೆವು. ನಾವು ಟಿ.ಬಿ ಬಡಾವಣೆ ಯ ಆಟೋ ನಿಲ್ದಾಣದ ಹತ್ತಿರ ಹೋಗಿ ಪಂಚರಾಗಿ ಸಹಕರಿಸಲು ಸಾರ್ವಜನಿಕರಿಗೆ ಕೋರಿದಾಗ ಯಾರು ಸಹ ಒಪ್ಪಲಿಲ್ಲ. ಆಗ ನಾವು ಎಲ್ಲ ಸಿಬ್ಬಂದಿಯವರು ಸದರಿ ಸ್ಥಳದಲ್ಲಿ ಕಾಯುತ್ತಿದ್ದಾಗ ಬಾತ್ಮಿದಾರರು

ಹೇಳಿದಂತಹ ಒಬ್ಬ ವ್ಯಕ್ತಿ ಚಾಸಾ -2 ಆಟೋದಿಂದ ಬಂದು ಇಳಿದಿರುತ್ತಾನೆ. ಆತನಿಗೆ ಸುತ್ತುವರಿದು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಹರೀಶ್ ಕೆ.ಟಿ ಬಿನ್ ತಿಮ್ಮಯ್ಯ, ವಾಸ ತುರುವೇಕೆರೆ ಎಂದು ಹೇಳಿ, ಹುಸೇನ್ ಬಿ ಎಂಬುವವರ ಮನೆಯಲ್ಲಿ ಗಾಂಜಾ ಖರೀದಿಸಲು ಬಂದಿರುವುದಾಗಿ ಹೇಳಿರುತ್ತಾನೆ. ಚಾಸಾ 2 ರವರಿಗೆ ಹುಸೇನ್ ಬಿ ಮತ್ತು ಅವರ ಮನೆಯನ್ನು ತೋರಿಸಲು ಹೇಳಿದಾಗ ಆತ ಒಪ್ಪಿ ನಮ್ಮ ಜೊತೆಗೆ ವಾಹನದಲ್ಲಿ ನಮಗೆ ಹುಸೇನ್ ಬಿ ರವರ ಮನೆ ಹತ್ತಿರ ಕರೆದುಕೊಂಡು ಹೋಗಿ ಸದರಿ ಮನೆ ಮುಂದೆ ಕುಳಿತ ಮಹಿಳೆ ಹುಸೇನ್ ಬಿ ಹಾಗೂ ಸದರಿ ಮನೆ ಅವರ ಮನೆ ಎಂದು ತೋರಿಸಿರುತ್ತಾರೆ. ನಂತರ ಹುಸೇನ್ ಬಿ ರವರಿಗೆ ವಿಚಾರಣೆ ಮಾಡಿದಾಗ ಗಾಂಜಾ ಮಾರಾಟದ ಅಪಾದನೆ ನಿರಾಕರಿಸಿರುತ್ತಾರೆ. ಆದ್ದರಿಂದ ನಾವು ಅಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಪಂಚರಾಗಿ ಸಹಕರಿಸಲು ಕೋರಿದರು ಸಹ ಅವರು ಯಾರು ಒಪ್ಪಲಿಲ್ಲ. ಆದ್ದರಿಂದ ನಮ್ಮ ಸಿಬ್ಬಂದಿಯವರನ್ನು ಪಂಚರಾಗಿ ಕರೆದುಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ಶೋದನಾ ವಾರೆಂಟ್ ತಯಾರಿಸಿ ಅದರಲ್ಲಿ ಪಂಚರ ಸಹಿ ಪಡೆದು ನಾನು ಸಹಿ ಮಾಡಿರುತ್ತೇನೆ. ಶೋದನಾ ವಾರೆಂಟ್ ನಲ್ಲಿ ನನ್ನ ಸಹಿ ಇದೆ. ಶೋಧನಾ ವಾರೆಂಟನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ನಾವು ಸದರಿ ಮಹಿಳೆಯ ಮನೆಯಲ್ಲಿ ಪ್ರವೇಶ ಮಾಡಿ ಒಳಗಡೆ ಹೋದಾಗ ಬಲಗಡೆ ಇರುವ ಒಂದು ಕಬ್ಬಿಣದ ಮಂಚದ ಮೇಲೆ ಒಂದು ಕಪ್ಪು ಪ್ಲಾಸ್ಟಿಕ್ ಕವರಿತ್ತು. ಅದನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಒಣಗಿದ ಕಾಂಡ, ಎಲೆ ಮತ್ತು ಬೀಜಗಳಿಂದ ಕೂಡಿದ ಗಾಂಜಾ ತುಂಬಿದ 3 ಚಿಕ್ಕ ಪ್ಯಾಕೇಟ್ ಹಾಗೂ ಬಿಡಿಯಾಗಿರುವ ಗಾಂಜಾ ಸಹ ಇತ್ತು. ಸದರಿ ಮಹಿಳೆಗೆ ವಿಚಾರಣೆ ಮಾಡಿದಾಗ ಹಣಗಳಿಸುವ ಉದ್ದೇಶದಿಂದ ಮಾರಾಟ ಮಾಡಲು ಇಟ್ಟಿರುವುದಾಗಿ ಹೇಳಿರುತ್ತಾರೆ. ಸದರಿ ಮನೆಯ ಎಲ್ಲಾ ಭಾಗವನ್ನು ಪರಿಶೀಲನೆ

ಮಾಡಿದಾಗ ಬೇರೆ ಸ್ಥಳಗಳಲ್ಲಿ ಗಾಂಜಾ ದೊರೆತಿಲ್ಲ. ಸದರಿ ಗಾಂಜಾ ಸೊಪ್ಪು ಇರುವ ಕವರ್ ಎಲೆಕ್ಟ್ರಾನಿಕ್ ತೂಕದ ಮೆಷಿನ್ ಮೇಲೆ ತೂಕ ಮಾಡಿದಾಗ ಕವರ್ ಸಮೇತ 95 ಗ್ರಾಂ ಇತ್ತು. ಸ್ಥಳದಲ್ಲಿ ಜಪ್ತಿ ಪತ್ರ ತಯಾರಿಸಿ ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿದ್ದೇವೆ. ಜಪ್ತಿ ಪತ್ರದಲ್ಲಿ ನನ್ನ ಸಹಿ ಇದೆ. ಜಪ್ತಿ ಪತ್ರ ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು. ದೊರೆತ ಗಾಂಜಾ ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿ ಅರಿಗಿನಿಂದ ಸೀಲ್ ಮಾಡಿ ಇಲಾಖಾ ಸೀಲು 310 ರಿಂದ ಮೊಹರು ಮಾಡಿದೆವು. ಮಾದರಿ ಸೀಲ್ ನ ನಕಲು ತಯಾರಿಸಿ, ಅದರಲ್ಲಿ ನಾನು ಮತ್ತು ಪಂಚರು ಸಹಿ ಮಾಡಿದ್ದೇವೆ. ಮಾದರಿ ಸೀಲ್ ನ ನಕಲಿನಲ್ಲಿ ನನ್ನ ಸಹಿ ಇದೆ. ಸದರಿ ನಕಲು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3 (ಎ) ಎಂದು ಗುರುತಿಸಲಾಯಿತು. ನಂತರ ವಶಕ್ಕೆ ಪಡೆದ ಮಾಲಿನ ವಿವರವನ್ನು ಒಂದು ಚೀಟಿಯ ಮೇಲೆ ಬರೆದು ನಾನು ಮತ್ತು ಪಂಚರು ಅದರ ಮೇಲೆ ಸಹಿ ಮಾಡಿ ಸದರಿ ಚೀಟಿ, ಗಾಂಜಾ ಸೊಪ್ಪು ಕಟ್ಟಿದ ಬಿಳಿ ಬಟ್ಟೆಯ ಚೀಲಕ್ಕೆ ಅಂಟಿಸಿರುತ್ತೇವೆ. ಈ ಎಲ್ಲಾ ಪ್ರಕ್ರಿಯೆ ಛಾಯಾಗ್ರಹಣ ಮಾಡಿದ್ದೇವೆ. ಸಂಜೆ 05.30 ರಿಂದ 06.00 ಗಂಟೆಯವರೆಗೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದೇವೆ. ಮಹಜರ್ ನಲ್ಲಿ ನನ್ನ ಸಹಿ ಇದೆ. ಮಹಜರ್ ನಿಪಿ 4 ಎಂದು ಸಾಕ್ಷಿಯ ಸಹಿಯನ್ನು ನಿಪಿ 4 (ಎ) ಎಂದು ಗುರುತಿಸಲಾಯಿತು. 2 ಫೋಟೊಗಳನ್ನು ನೋಡುತ್ತಿದ್ದು ಅವು ಮಹಜರ್ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ನಂತರ ಸದರಿ ಮಹಿಳೆಗೆ ನಮ್ಮ ಸುಪರ್ದಿಗೆ ಪಡೆದು, ದೊರೆತ ಮಾಲು ಮತ್ತು ಮಹಿಳೆಯೊಂದಿಗೆ ನಮ್ಮ ಕಛೇರಿಗೆ ವಾಪಸ್ಸು ಬಂದು ಪ್ರಕರಣವನ್ನು ದಾಖಲಿಸಿ ಸದರಿ ಮಹಿಳೆಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ ಹಾಗೂ ಪ್ರ.ವ.ವ ಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪ್ರ.ವ.ವ

ಯಲ್ಲಿ ನನ್ನ ಸಹಿ ಇದೆ. ಪ್ರ.ವ.ವ ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ 7 (ಎ) ಎಂದು ಗುರುತಿಸಲಾಯಿತು. ತರ್ಪೆ ಪಿರ್ಯಾದಿಯಲ್ಲಿ ನನ್ನ ಸಹಿ ಇದೆ. ಸದರಿ ಪಿರ್ಯಾದಿಯನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು.

ದಿಃ 03.06.2022 ರಂದು ವಶಕ್ಕೆ ಪಡೆದ ಗಾಂಜಾ ಇನ್ವೆಂಟರಿ ಜರುಗಿಸಿ ಕೊಡಲು ಕೋರಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಹಾಗೂ ದಿಃ 28.06.2022 ರಂದು ಮಾನ್ಯ ನ್ಯಾಯಾಲಯದಲ್ಲಿ ಇನ್ವೆಂಟರಿ ಜರುಗಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಗಾಂಜಾವನ್ನು ಪ್ರತ್ಯೇಕವಾಗಿ ತೆಗೆಯಲಾಗಿದೆ.

ದಿಃ 04.07.2022 ರಂದು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ್ದೇನೆ. ಸದರಿ ಮನವಿ ಪತ್ರದಲ್ಲಿ ನನ್ನ ಸಹಿ ಇದೆ. ಮನವಿ ಪತ್ರ ನಿಪಿ 9 ಎಂದು ಸಾಕ್ಷಿಯ ಸಹಿಯನ್ನು ನಿಪಿ 9 (ಎ) ಎಂದು ಗುರುತಿಸಲಾಯಿತು. ದಿಃ 04.07.2022 ರಂದು ಉಳಿದ ಗಾಂಜಾ ಸೊಪ್ಪನ್ನು ಉಗ್ರಾನ್ ಗೆ ಹಸ್ತಾಂತರಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಗಾಂಜಾ ಸೊಪ್ಪು ಉಳ್ಳ ಸೀಲ್ ಮಾಡಿದ ಪ್ಯಾಕೇಟ್ ನೋಡುತ್ತಿದ್ದು ಅದು ಇನ್ವೆಂಟರಿ ಮೂಲಕ ನ್ಯಾಯಾಲಯದಲ್ಲಿ ಪ್ರತ್ಯೇಕವಾಗಿ ತೆಗೆಯಲಾಗಿದೆ. ಸದರಿ ಪ್ಯಾಕೇಟ್ ಮೇಲೆ ನನ್ನ ಸಹಿ ಇದೆ. ಸದರಿ ಪ್ಯಾಕೇಟ್ ಮು.ಮ 1 ಎಂದು, ಸಾಕ್ಷಿಯ ಸಹಿಯನ್ನು ಮು.ಮಾ 1(ಎ) ಎಂದು ಗುರುತಿಸಲಾಯಿತು. ಸದರಿ ದಿನ ನಾವು ದಾಳಿ ಮಾಡಿ ವಶಕ್ಕೆ ಪಡೆದ ಮಹಿಳೆ ನ್ಯಾಯಾಲಯದ ಮುಂದೆ ಆರೋಪಿಯಾಗಿ ಹಾಜರಿದ್ದಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

ಮದ್ಯಾಹ್ನ 04.30 ರಿಂದ 04.45 ರ ನಡುವೆ ನಮಗೆ ಮಾಹಿತಿ ಬಂದಿರುತ್ತದೆ. ಸದರಿ ವಿಚಾರ ಪ್ರ.ವ.ವ ಯಲ್ಲಿ ನಮೂದಿಸಿಲ್ಲ. ನನ್ನ ಜೊತೆಗೆ ಬಂದ ಎಲ್ಲಾ ಸಿಬ್ಬಂದಿ ಕಛೇರಿ ಕೆಲಸದಲ್ಲಿ ಇದ್ದರು. ಮಾಹಿತಿ ಬಂದ ತಕ್ಷಣ ಮೇಲಾದಿಕಾರಿಗಳಿಗೆ ಪೋನ್ ಮೂಲಕ ತಿಳಿಸಿದ್ದೇನೆ. ಸದರಿ ವಿಚಾರ ಪಂಚನಾಮೆಯಲ್ಲಿ ಹೇಳಿದ್ದೇನೆ. ಅಬಕಾರಿ ಉಪ ಅಧೀಕ್ಷಕರು ನಾಗಮಂಗಲದಲ್ಲಿ ಗಸ್ತಿನಲ್ಲಿದ್ದ ಕಾರಣ ಅವರು ನನಗೆ ತಕ್ಷಣ 04.30 ರ ಸಮಯಕ್ಕೆ ಮೌಖಿಕವಾಗಿ ಅಧಿಕಾರ ಕೊಟ್ಟು ಲಿಖಿತವಾಗಿ ಸಹ ಕೊಟ್ಟಿದ್ದಾರೆ. ಮೌಖಿಕವಾಗಿ ಅಧಿಕಾರ ಪಡೆದ ತಕ್ಷಣ ನಾವು ದಾಳಿಗೆ ಹೊರಟಿದ್ದು ನಂತರ ಅವರು ನಮ್ಮ ಕಛೇರಿಗೆ ಬಂದು ಲಿಖಿತವಾಗಿ ಅಧಿಕಾರ ಕೊಟ್ಟಿದ್ದಾರೆ. ಸದರಿ ವಿಚಾರವನ್ನು ಮಹಜರ್ ನಲ್ಲಿ ಬರೆದಿಲ್ಲ. ಟಿ.ಬಿ ವೃತ್ತದಿಂದ ನ್ಯಾಯಾಲಯಕ್ಕೆ ಬರುವ ದಾರಿಯ ಎಡಗಡೆಗೆ ಇರುವ ಆಟೋ ನಿಲ್ದಾಣದಲ್ಲಿ ನಾನು ನಿಂತಿದ್ದೆ ಹಾಗೂ ನಮ್ಮ ಸಿಬ್ಬಂದಿ ಎಲ್ಲಾ ಕಡೆಗೆ ನಿಂತಿದ್ದರು. ಸದರಿ ವ್ಯಕ್ತಿ ಬೆಳ್ಳೂರು ಕಡೆಯಿಂದ ಬಂದಾಗ ಎಡಗಡೆ ಇರುವ ಬಸ್ ನಿಲ್ದಾಣದ ಆಟೋ ಸ್ಟಾಂಡ್ ನಲ್ಲಿ ಇಳಿದಿರುತ್ತಾನೆ. ಟಿ.ಬಿ ವೃತ್ತದಿಂದ ಸದರಿ ಆಟೋ ನಿಲ್ದಾಣ ಸುಮಾರು 70-80 ಮೀಟರ್ ದೂರವಿದೆ ಎಂದರೆ ಇರಬಹುದು. ಸದರಿ ವ್ಯಕ್ತಿ ಬಂದ ಆಟೋ ಸಂಖ್ಯೆ ನೆನಪಿಲ್ಲ. ಚಾಸಾ 3 ಮತ್ತು 4 ರವರು ಆತನಿಗೆ ಸುತ್ತು ವರಿಯುತ್ತಿದ್ದಂತೆ ನಾವು ಸಹ ಅಲ್ಲಿ ಹೋಗಿ ಆತನಿಗೆ ಸುತ್ತುವರಿದಿದ್ದೇವೆ. ಸದರಿ ವ್ಯಕ್ತಿಗೆ ಸುಮಾರು 5 ನಿಮಿಷ ವಿಚಾರಣೆ ಮಾಡಿದ್ದೇವೆ. ಸದರಿ ಸ್ಥಳದಲ್ಲಿ ವ್ಯಕ್ತಿಯ ಛಾಯಾಚಿತ್ರ ತೆಗೆದಿಲ್ಲ, ಅಷ್ಟು ಕಾಲಾವಕಾಶ ಇರಲಿಲ್ಲ. ಆರೋಪಿಯ ಮನೆಯ ಹೊರಗಡೆಯಿಂದ ಛಾಯಚಿತ್ರ ತೆಗೆಯಲು ತೊಂದರೆ ಇರಲಿಲ್ಲ. ಮಂಚದ ಮೇಲೆ ಕಪ್ಪು ಕವರ್ ಇರುವುದನ್ನು ಪೋಟೊ ತೆಗೆದು ಹಾಜರುಪಡಿಸಿಲ್ಲ. ಸದರಿ ಕವರಿನ ಅಳತೆ ಮಹಜರಿನಲ್ಲಿ ನಮೂದಿಸಿಲ್ಲ. ನಾವು ಎಲೆಕ್ಟ್ರಾನಿಕ್ ತೂಕದ ಮೆಷಿನ್ ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದೆವು, ಅದು ಅಗತ್ಯ

ಪರಿಕರನಲ್ಲಿ ಒಂದು. ಇನ್ವೆಂಟರಿ ಮೊದಲು ನಾವು ವಶಕ್ಕೆ ಪಡೆದ ಗಾಂಜಾ ಅದನ್ನು ಸೀಲ್ ಮಾಡಿದ ಬಟ್ಟೆಯೊಂದಿಗೆ ತೂಕ ಮಾಡಿದಾಗ 108.02 ಗ್ರಾಂ ಇತ್ತು. ನಾವು ಆರೋಪಿಯ ಮನೆಯಲ್ಲಿ ಯಾವುದೇ ದಾಳಿ ಮಾಡಿಲ್ಲ, ಗಾಂಜಾ ವಶಕ್ಕೆ ಪಡೆದಿಲ್ಲ ಹಾಗೂ ಪಂಚನಾಮೆ ಸಹ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.  ನಾನು ದಿಃ 01.06.2022 ರಂದು ಅಬಕಾರಿ ಉಪ ಅಧೀಕ್ಷಕರಿಗೆ ಸಲ್ಲಿಸಿದ ಪತ್ರದಲ್ಲಿ ಗಾಂಜಾ ಗಿಡಗಳನ್ನು ವಶ ಪಡಿಸಿಕೊಂಡಿರುವುದಾಗಿ ವಿಷಯದಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ಅದು ತಪ್ಪಾಗಿದೆ. ಸದರಿ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ನಂತರ ಸೀಲ್ ಮಾಡದೆ ಉಳಿದ 13 ಗ್ರಾಂ ಗಾಂಜಾ ಸೊಪ್ಪು ಹಾಗೂ ಅದು ಸೀಲ್ ಮಾಡಿದ ನಂತರ ಅದರ ತೂಕ 42.08 ಗ್ರಾಂ ಆಗಿದ್ದು, ಅದನ್ನು ಉಗ್ರಾನ್ ಗೆ ಕಳುಹಿಸಿದ್ದೇನೆ. ಆರೋಪಿಯ ಮನೆಯಿಂದ ಯಾವುದೇ ಗಾಂಜಾ ವಶಕ್ಕೆ ಪಡೆದಿಲ್ಲ, ನಮ್ಮ ಸಿಬ್ಬಂದಿಗಳನ್ನೇ ಪಂಚರಾಗಿ ತೋರಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ನಿಪಿ 5 ಮತ್ತು 6 ಪೋಟೋದಲ್ಲಿ ನಮ್ಮ ಎಲ್ಲಾ ಸಿಬ್ಬಂದಿಗಳು ಇರುವುದಿಲ್ಲ ಎಂದರೆ ಸಾಕ್ಷಿ ಇಬ್ಬರು ಪೋಟೋದಲ್ಲಿ ಇದ್ದು, ಒಬ್ಬರು ಪೋಟೋ ತೆಗೆಯುತ್ತಿದ್ದರು ಹಾಗೂ ಇನ್ನೊಬ್ಬರು ಹೊರಗಡೆ ಇದ್ದರು ಎನ್ನುತ್ತಾರೆ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).

ಸಾ.ಓ.ಹೇ.ಕೆ.ಸ.ಇ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ.